ಮಂಡ್ಯ ನಗರದಲ್ಲಿ ಟ್ರಾಫಿಕ್ ಸರ್ವೆ ಕೈಗೊಳ್ಳುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 61(195)

ಸದಸ್ಯರ ಹೆಸರು ಶ್ರೀ ಆತ್ಮಾನಂದ ಎಂ ಎಸ್ (ಮಂಡ್ಯ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್ (ಸಾರಿಗೆ ಸಚಿವರು)

ಪ್ರಶ್ನೆ

ಅ) ಮಂಡ್ಯ ನಗರದಲ್ಲಿ ಸಂಚಾರ ವ್ಯವಸ್ಥೆ ಸುಧಾರಿಸಲು ಹಾಗೂ ಸಂಚಾರ ನಿಯಂತ್ರಣ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ 'ಟ್ರಾಫಿಕ್ ಸರ್ವೆ'' ಕಾರ್ಯ ಕೈಗೊಳ್ಳಬೇಕಾದ ಅವಶ್ಯಕತೆಯನ್ನು ಸರ್ಕಾರವು ಮನಗಂಡಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಏನಾದರೂ ಕ್ರಮ ಕೈಗೊಂಡಿದೆಯೇ?

ಇ) ಸರ್ಕಾರವು ಸಂಚಾರಿ ನಿಯಂತ್ರಣ ಕ್ರಮಕ್ಕೆ ಪೂರಕವಾಗಿ ಮಂಡ್ಯ ನಗರದಲ್ಲಿ ಟ್ರಾಫಿಕ್ ಸಿಗ್ನಲ್ ಲೈಟುಗಳನ್ನು ಅಳವಡಿಸುವುದೇ?

ಉತ್ತರ

ಅ) ಗಮನಿಸಿರುತ್ತ

ಆ) 1 ಮಂಡ್ಯ ನಗರದ ಪ್ರಮುಖ ವೃತ್ತವಾದ ಸಂಜಯ ವೃತ್ತದಲ್ಲಿ ಸ್ಥಗಿತಗೊಂಡಿದ್ದ ಸಿಗ್ನಲ್ ಲೈಟುಗಳನ್ನು ಸರಿಪಡಿಸಿ ರಾಜ್ಯ ಹೆದ್ದಾರಿಯ ಹಾಗೂ ಆರ್ ಪಿ ರಸ್ತೆ ಡಿ ಸಿ ಸಿ ಬ್ಯಾಂಕ್ ಕಡೆಗಳಿಗೆ ಹೋಗುವ ವಾಹನಗಳಿಗೆ ಹಾಗೂ ಪಾದಚಾರಿಗಳಿಗೆ ಅನುಕೂಲವಾಗುವಂತೆ ಮಾಡಿಸಿರುತ್ತೆ

2 ಎಲ್ಲಾ ವೃತ್ತಗಳಲ್ಲಿ ಪಾದಚಾರಿಗಳು ಹೆದ್ದಾರಿಯನ್ನು ದಾಟುವ ನಾಲ್ಕು ಕಡೆಗಳಲ್ಲಿ ಪಾದಚಾರಿಗಳ ರನ್ನೆ ದಾಟುವ ಸ್ಥಳಗಳನ್ನು ಗುರುತು ಮಾಡಿಸಿರುತ್ತೆ

3 ಸಂಜಯ ವೃತ್ತದಲ್ಲಿ ಟ್ರಾಫಿಕ್ ಐಲ್ಯಾಂಡ್ ನಿರ್ಮಿಸಿ ಸದರಿ ಐಲ್ಯಾಂಡಿನಲ್ಲಿ ಸಂಚಾರಿ ಪೋಲೀಸರು ನೀಡುವ ಸೂಚನೆಗಳು ನಾಲ್ಕು ದಿಕ್ಕುಗಳಿಂದ ಬರುವ ವಾಹನ ಚಾಲಕರುಗಳಿಗೆ ದೂರದಿಂದ ಕಾಣಿಸುವ ವ್ಯವಸ್ಥೆ ಮಾಡಿಸಿರುತ್ತ

4 ವಿ ವಿ ರಸ್ತೆಯಲ್ಲಿ ಈ ಹಿಂದೆ ವಾಹನಗಳು ಅಡ್ಡಾದಿಡ್ಡಿಯಾಗಿ ನಿಲ್ಲಿಸಿ, ಸಾರ್ವಜನಿಕರಿಗೆ ತಿರುಗಾಡಲು ತೊಂದರೆಯಾಗುವಂತೆ ರನ್ನಗಳಲ್ಲಿ ನಿಲ್ಲಿಸುತ್ತಿದ್ದು ಇದನ್ನು

ತಡೆಗಟ್ಟುವ ಸಲುವಾಗಿ ಹೊಸದಾಗಿ ಕ್ರಾಬ್‌ಲಾಕ್ ಎಂಬ ಲಾಕಿಂಗ್ ವ್ಯವಸ್ಥೆ ಜಾರಿಗೊಳಿಸಿರುತ್ತೆ

5 ಮಂಡ್ಯ ನಗರದ ಜೋಡಿ ರಸ್ತೆ ಮಧ್ಯ ಇರುವ ರೋಡ್ ಮೀಡಿಯನಲ್ಲಿ ಪಿ ಡಬ್ಲ್ಯೂ ಡಿ ಇಲಾಖೆಯ ಸಹಕಾರದಿಂದ ಕೀಪ್ ಲೆಫ್ಟ್ ರಿಫ್ಲೆಕ್ಟರ್ ಬಣ್ಣದ ಸೂಚಾನಾ ಬೋರ್ಡ್‌ಗಳನ್ನು ಹಾಗೂ ಬಿಂಕರ್ಸ್ ಲೈಟ್‌ಗಳನ್ನು ಅಳವಡಿಸಿರುತ್ತೆ

6 ಹೊಸದಾಗಿ ಪಬ್ಲಿಕ್ ಅಡ್ರಸ್ ಸಿಸ್ಟಮ್ ಅಳವಡಿಸಿರುವ ಟೆಂಪೋದಲ್ಲಿ ಸಂಚಾರ ಪೊಲೀಸ್ ಠಾಣೆಯ ಎ ಎಸ್ ಐ ಒಬ್ಬರನ್ನು ನೇಮಕ ಮಾಡಿ ಸದರಿ ವಾಹನ ನಗರದ ಪ್ರಮುಖ ರಸ್ತೆಗಳಲ್ಲಿ ಹಾಗೂ ಹೆಚ್ಚಿನ ಜನಸಂದಣಿ ಇರುವ ಸ್ಥಳಗಳಲ್ಲಿ, ಪ್ರಮುಖ ರಸ್ತೆಗಳಲ್ಲಿ ಹಾಗೂ ಪ್ರಮುಖ ಸರ್ಕಲ್‌ಗಳಲ್ಲಿ ವಾದಚಾರಿಗಳಿಗೆ ಮತ್ತು ವಾಹನ ಚಾಲಕರುಗಳಿಗೆ ಸುರಕ್ಷತೆಯ ಸಂಚಾರ ಹಾಗೂ ಸಂಚಾರ ನಿಯಮಗಳ ಬಗ್ಗೆ ಪ್ರಚಾರ ಮಾಡುವ ವ್ಯವಸ್ಥೆ ಮಾಡಿಸಿರುತ್ತೆ

7 ಅಪಘಾತಗಳನ್ನು ತಡೆಗಟ್ಟುವ ಸಲುವಾಗಿ ಗಾಯಾಳುಗಳ ತುರ್ತು ಚಿಕಿತ್ಸೆಗಾಗಿ ಹಾಗೂ ಸಹಾಯಕ ರಾಜ್ಯ, ಹೆದ್ದಾರಿಯಲ್ಲಿ ''ಜೀವನ್ ರಕ್ಷಾ'' ಕೇಂದ್ರ ಎಂಬ ಪೋಲೀಸ್ ಸಹಾಯ ಕೇಂದ್ರವನ್ನು ಗೌಡಹಳ್ಳಿ ಗೇಟ್ ಬಳಿ ಸ್ಥಾಪಿಸಿದ್ದು, ಸಿಬ್ಬಂದಿಯ ಮೈಸೂರು ಬೆಂಗಳೂರು ಹೆದ್ದಾರಿಯಲ್ಲಿ ಮಂಡ್ಯ ನಗರವು ಸೇರಿದಂತೆ ದಿನದ 24 ಗಂಟೆಗಳೂ ಗಸ್ತುಕಾರ್ಯ ನಿರ್ವಹಿಸಲಾಗುತ್ತಿದೆ

8 ಮಂಡ್ಯ ನಗರದ ಮುಖ್ಯ ರಸ್ತೆಯಲ್ಲಿ ಅಂದರೆ ರಾಜ್ಯ ಹೆದ್ದಾರಿಯಲ್ಲಿ ಓಡಾಡುವ ವಾಹನಗಳಿಗೆ ಅಡಚಣೆ ಮಾಡುವ ಬೀದಿ ದನಗಳ ನಿಯಂತ್ರಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ

9 ಶಾಲಾ, ಕಾಲೇಜು ಆಸ್ಪತ್ರೆ ಕಛೇರಿ ಬಸ್ ನಿಲ್ದಾಣ, ಹಾಗೂ ಇತರೆ ಜನ ಸಂದಣಿ ಪ್ರದೇಶಗಳಲ್ಲಿ ವೇಗದ ಮಿತಿಯನ್ನು ನಿಗದಿಗೊಳಿಸಿದಂತೆ ಸಂಚಾರ ನಿಯಂತ್ರಣ ಕೈಗೊಳ್ಳಲಾಗುತ್ತಿದೆ

10 ಪೇಟೆ ಬೀದಿಯ ರಸ್ತೆಯು ವ್ಯಾಪಾರ ವಾಣಿಜ್ಯದ ರಸ್ತೆಯಾಗಿದ್ದು ಪೇಟೆ ಬಿದಿಯಲ್ಲಿಯೇ ಕಬ್ಬಿನ ಗಾಡಿಗಳು ಹೋಗಬೇಕಾಗಿರುವುದರಿಂದ ವ್ಯಾಪಾರದ ಸಲುವಾಗಿ ಲಾರಿಗಳಲ್ಲಿ ಹಾಗು ತಳ್ಳುವ ಗಾಡಿಗಳಲ್ಲಿ ಸಾಮಾನುಗಳನ್ನು ಸರಒರಾಜು ಮಾಡಬೇಕಾಗಿರುವುದರಿಂದ ಸದರಿ ರಸ್ತೆಗಳಲ್ಲಿ ದಿನ ಬಿಟ್ಟು ದಿನ ಒಂದೊಂದು ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ

11 ನಗರದ ಸಂಚಾರ ಪೋಲೀಸ್ ಠಾಣೆಯ ಸಿಬ್ಬಂದಿ ಪ್ರತಿನಿತ್ಯ ಸಂಚಾರ ನಿಯತ್ರಣ ಹಾಗೂ ಸುಧಾರಣೆಗಳನ್ನು ಕೈಗೊಳ್ಳುತ್ತಿದ್ದಾರೆ

ಇ) ಮಂಡ್ಯ ನಗರದ ಮೈಸೂರು, ಬೆಂಗಳೂರು, ಹೆದ್ದಾರಿಯ 3 ಪ್ರಮುಖ ವೃತ್ತಗಳಲ್ಲಿ (ಸರ್ಕಲ್‌ಗಳಲ್ಲಿ) ಟ್ರಾಫೀಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿರುತ್ತೆ

ಮಂಗಳೂರು ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 66(309)

ಸದಸ್ಯರ ಹೆಸರು ಶ್ರೀ ಮಲ್ಲಿಕಾರ್ಜುನ ಕೆ ಬಿ (ಬೀರೂರು)

ಉತ್ತರಿಸುವ ಸಚಿವರು. ಶ್ರೀ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ ಮಂಗಳೂರು ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಂದಿದ್ದಲ್ಲಿ, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟ ಎಷ್ಟು?

ಇ ಈ ಅವ್ಯವಹಾರದಲ್ಲಿ ಎಷ್ಟು ಅಧಿಕಾರಿಗಳು ಹಾಗೂ ಅಧಿಕಾರೇತರರು ಭಾಗಿಯಾಗಿರುತ್ತಾರೆ (ವಿವರ ನೀಡುವುದು) ಪ್ರಕರಣದಲ್ಲಿ ಭಾಗಿಯಾದವರ ಮೇಲೆ ತೆಗೆದುಕೊಂಡಿರುವ ಕ್ರಮವೇನು?

ಉತ್ತರ

ಅ ಹೌದು

ಆ 1998-99ನೇ ಸಾಲಿನ ಲೆಕ್ಕಪತ್ರದ ಅಂತಿಮ ಆಡಿಟ್ ವರದಿ ಪ್ರಕಾರ ರೂ 65,01,501-00

ಇ ಈ ಕೆಳಕಂಡ ಅಧಿಕಾರಿ ನೌಕರರು ಈ ಪ್ರಕರಣದಲ್ಲಿ ಭಾಗಿಯಾಗಿದ್ದು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು